ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ನಾಡಕಛೇರಿ ಉಪ ತಹಶೀಲ್ದಾರರ ಹುದ್ದೆ ನೇಮಕಾತಿ

2819 (3724)

ಶ್ರೀ ಡಿ.ವಿ.ಸದಾನಂದ ಗೌಡ, (ಪುತ್ತೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಪುತ್ತೂರು ತಾಲ್ಲೂಕಿನಲ್ಲಿ ಕಳೆದ 8 ತಿಂಗಳಿಂದ ಉಪ್ಪಿನಂಗಡಿ ನಾಡಕಛೇರಿಯಲ್ಲಿ ಉಪ ತಹಸೀಲ್ದಾರರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಉಪ ತಹಶೀಲ್ದಾರ್‌ರ ಹುದ್ದೆಯನ್ನು ಯಾವಾಗ ತುಂಬಲಾಗುವುದು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

1) ಬಂದಿದೆ.

2) ಆದಷ್ಟು ಶೀಘ್ರವಾಗಿ ತುಂಬಲಾಗುವುದು

ಕಂದಾಯ ಇಲಾಖೆಯ ದಿನಗೂಲಿ ಬೆರಳಚ್ಚುಗಾರರು.

2820: (3725)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1985ರಿಂದ 1987ರವರೆಗಿನ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ನೇಮಕಾತಿ ಮಾಡಲಾಗಿರುವ ದಿನಗೂಲಿ ಬೆರಳಚ್ಚುಗಾರರ ಸಂಖ್ಯೆ ಎಷ್ಟು;

ಆ) ಅವರುಗಳನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 19.